# <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಆನಾಸ 6 ಕಾಮಾಸೇ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:06.03.2014

## <u>ಸುತ್ತೋಲೆ</u>

ವಿಷಯ: ಸಾರ್ವಜನಿಕ ಉದ್ಯೋಗದ ನೇಮಕಾತಿಗಳಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ಕಲ್ಪಿಸಿರುವ ಮೀಸಲಾತಿಯನ್ವಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿ/ನೌಕರರು ಸ್ಥಳೀಯ ವೃಂದಗಳಿಗೆ ಹಂಚಿಕೆ ಹೊಂದಲು ಅಭಿಮತ ನೀಡುವ ಕುರಿತು.

ಉಲ್ಲೇಖ:
1) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013, ದಿನಾಂಕ: 06.11.2013.
2) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013.
3) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013.
4) ಅಧಿಸೂಚನೆ ಸಂಖ್ಯೆ: ಆನಾಸ 6 ಕಾಮಾಸೇ 2014, ದಿನಾಂಕ: 06.03.2014.

-----

ಉಲ್ಲೇಖ (1)ರ ದಿನಾಂಕ:06.11.2013ರ ಆದೇಶದಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗದ ನೇಮಕಾತಿಗಳಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಮೀಸಲಾತಿಯನ್ನು ಕಲ್ಪಿಸಿ ಸರ್ಕಾರವು ಆದೇಶ ಹೊರಡಿಸಿದೆ. ಸದರಿ ಆದೇಶದ 3 ಮತ್ತು 13ನೇ ಕಂಡಿಕೆಗಳಿಗನುಸಾರವಾಗಿ, ವೃಂದ ನಿಯಂತ್ರಣ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ, ಪ್ರತಿಯೊಂದು ವೃಂದಗಳಲ್ಲಿನ ಹುದ್ದೆಗಳ ಸಂಖ್ಯೆಯನ್ನು ಗುರುತಿಸತಕ್ಕದ್ದಾಗಿದೆ. ಮುಂದುವರೆದು, ಈ ರೀತಿ ಗುರುತಿಸಲಾದ ಸ್ಥಳೀಯ ವೃಂದದಲ್ಲಿನ ಹುದ್ದೆಗಳನ್ನು ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರವಾಗಿ ಮುಂಬಡ್ತಿ ಅಥವಾ ನೇರ ನೇಮಕಾತಿಯಡಿ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದಾಗಿದೆ. ಈ ಬಗ್ಗೆ ಉಲ್ಲೇಖಿತ (2) ಮತ್ತು (3)ರಲ್ಲಿನ ನಿಯಮಗಳನ್ನೂ ಸಹ ಸರ್ಕಾರವು ರಚಿಸಿರುತ್ತದೆ.

2. ಮೇಲೆ ತಿಳಿಸಿದ ಆದೇಶ ಮತ್ತು ನಿಯಮಗಳನುಸಾರ, ಕಾನೂನು ಮಾಪನಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ ಸ್ಥಳೀಯ ವೃಂದಗಳನ್ನು ಗುರುತಿಸಿ ಉಲ್ಲೇಖ (4)ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

3. ಉಲ್ಲೇಖ (1)ರ ಆದೇಶ ದಿನಾಂಕ:06.11.2013ರಲ್ಲಿ "ಸ್ಥಳೀಯ ವೃಂದ" ಹಾಗೂ "ಸ್ಥಳೀಯ ವ್ಯಕ್ತಿ" ಎಂಬುದನ್ನು ಈಗಾಗಲೇ ವ್ಯಾಖ್ಯಾನಿಸಲಾಗಿದೆ. ಮುಂದುವರೆದು, ಸದರಿ ಆದೇಶದ ಕಂಡಿಕೆ–4ರ ಉಪ ಕಂಡಿಕೆ (2)ರ ಪ್ರಕಾರ ಹೈದರಾಬಾದ್–ಕರ್ನಾಟಕ ಪ್ರದೇಶದ ಅಧಿಕಾರಿ/ನೌಕರರಿಂದ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಳ್ಳುವ ಕುರಿತು ಅಭಿಮತ ನೀಡಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಉಲ್ಲೇಖಿತ (2)ರ

..2

ನಿಯಮಗಳ ನಿಯಮ 6ರ ಉಪ ನಿಯಮ (1)ರ ಪ್ರಕಾರ ಪ್ರಸ್ತುತ ಸೇವೆಯಲ್ಲಿರುವ ಅಧಿಕಾರಿ/ನೌಕರರು ಸ್ಥಳೀಯ ವ್ಯಕ್ತಿಗಳ ಮಾನದಂಡವನ್ನು ಪೂರೈಸುವ ಅರ್ಹತಾ ಪ್ರಮಾಣ ಪತ್ರದೊಂದಿಗೆ ಸ್ಥಳೀಯ ವೃಂದವನ್ನು ಸೇರಲು ನಿಗದಿತ ನಮೂನೆಗಳಲ್ಲಿ (ನಮೂನೆಗಳ ಪ್ರತಿಗಳನ್ನು ಲಗತ್ತಿಸಿದೆ) 30 ದಿನಗಳೊಳಗಾಗಿ ತಮ್ಮ ಆಯ್ಕೆಯನ್ನು ಅಭಿಮತದ ಮೂಲಕ ಚಲಾಯಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

4. ತತ್ಸಂಬಂಧ ಮೇಲಿನ ಉಲ್ಲೇಖ (3)ರಲ್ಲಿನ ನಿಯಮಗಳಲ್ಲಿ "ಸ್ಥಳೀಯ ವ್ಯಕ್ತಿ" ಎಂಬ ಮೀಸಲಾತಿಯನ್ನು ಕ್ಲೈಮ್ ಮಾಡುವ ಸಂಬಂಧ ಆರು ವಿವಿಧ ಪ್ರಮಾಣ ಪತ್ರಗಳನ್ನು ಆಧಾರವಾಗಿ ಗುರುತಿಸಲಾಗಿದೆ. ಈ ಪೈಕಿ ಹಾಲಿ ಸೇವೆಯಲ್ಲಿರುವ ಅಧಿಕಾರಿ/ನೌಕರರು ಸೇವಾ ಪುಸ್ತಕದಲ್ಲಿ ನಮೂದಿಸಲಾಗಿರುವ ಸ್ವಗ್ರಾಮ ಅಥವಾ ಸ್ಥಳದ ಆಧಾರದ ಮೇಲೆ ನಿಗದಿತ ನಮೂನೆಯಲ್ಲಿ ಸ್ವಗ್ರಾಮ ಪ್ರಮಾಣ ಪತ್ರ ಪಡೆದಿದ್ದಲ್ಲಿ ಪುನ: ಈ ನಿಯಮಗಳ ನಿಯಮ 3ರಡಿ ನಿರ್ದಿಷ್ಟಪಡಿಸಿರುವ ರೀತ್ಯ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವ ಅಗತ್ಯವಿರುವುದಿಲ್ಲ. ಉಳಿದ 5 ಪ್ರಮಾಣ ಪತ್ರಗಳ ಸಂಬಂಧ ಸಕ್ಷಮ ಪ್ರಾಧಿಕಾರವು ನೀಡುವ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಸದರಿ 5 ಪ್ರಮಾಣ ಪತ್ರಗಳ ನಮೂನೆಯ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ.

5. ಈ ಹಿನ್ನೆಲೆಯಲ್ಲಿ, ಕಾನೂನು ಮಾಪನಶಾಸ್ತ್ರ ಇಲಾಖೆಯ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಈ ಸುತ್ತೋಲೆಯ ಕಂಡಿಕೆ–3ರಲ್ಲಿ ತಿಳಿಸಿರುವ ನಮೂನೆಯಲ್ಲಿ ಸ್ಥಳೀಯ ವೃಂದಕ್ಕೆ ಆಯ್ಕೆ ಮಾಡುವ ಕುರಿತು ಅಭಿಮತವನ್ನು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಅಂದರೆ ದಿನಾಂಕ: 05.04.2014 ರೊಳಗೆ ಸಂಬಂಧಪಟ್ಟ ಸಹಾಯಕ ನಿಯಂತ್ರಕರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಸದರಿ ಅಭಿಮತವನ್ನು ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಪಡೆಯಬೇಕಾಗಿದ್ದು, ಅಭಿಮತವನ್ನು ಪಡೆಯುವುದಕ್ಕಾಗಿ ಕೆಳಕಂಡ ವೇಳಾಪಟ್ಟಿ ಪ್ರಕಾರ ಆಯಾ ಅಧಿಕಾರಿಗಳು ಅವರ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯ ಸಭೆ ಕರೆದು ಸದರಿ ಸಭೆಯಲ್ಲಿ ಅಭಿಮತವನ್ನು ಪಡೆಯಲು ಸೂಚಿಸಿದೆ:–

| ದಿನಾಂಕ | ಸಭೆ ಕರೆಯಬೇಕಾದ ಅಧಿಕಾರಿ | ಸಭೆಗೆ ಕರೆಸಬೇಕಾದ ಅಧಿಕಾರಿ/ಸಿಬ್ಬಂದಿ |
|---|---|---|
| 06.03.2014 ರಿಂದ 13.03.2014 | ಸರ್ಕಾರವು ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳ ಸ್ಥಳೀಯರಿಗೆ ಮೀಸಲಾತಿ ಕುರಿತಂತೆ ಹೊರಡಿಸಿರುವ ಆದೇಶ, ನಿಯಮಗಳು, ಸ್ಥಳೀಯ ವೃಂದ ರಚಿಸಿ ಹೊರಡಿಸಿರುವ ಅಧಿಸೂಚನೆ ಹಾಗೂ ಈ ಸುತ್ತೋಲೆಯ ಪ್ರತಿಗಳನ್ನು ಕಾನೂನು ಮಾಪನಶಾಸ್ತ್ರ ಇಲಾಖೆಯ ವೆಬ್‌ಸೈಟ್ www.legalmetrology.kar.nic.inನಲ್ಲಿ ಸಹ ಪ್ರಕಟಿಸಲಾಗಿದೆ. ಸದರಿ ವೆಬ್‌ಸೈಟ್‌ನಿಂದ ಈ ಆದೇಶಗಳ ಪ್ರತಿಗಳನ್ನು ಪಡೆದು ನೇಮಕಾತಿ ಪ್ರಾಧಿಕಾರವು ತಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ವಿತರಿಸುವುದು/ಗಮನಕ್ಕೆ ತರುವುದು. | |
| 14.03.2014 ರಿಂದ 21.03.2014 | ಸಹಾಯಕ ನಿಯಂತ್ರಕರು | ಅಧೀಕ್ಷಕರು, ನಿರೀಕ್ಷಕರು, ಶೀಘ್ರಲಿಪಿಗಾರರು, ಪ್ರಥಮ ದರ್ಜೆ ಸಹಾಯಕರು, ಹಿರಿಯ ಚಾಲಕರು. |
| 22.03.2014 ರಿಂದ 29.03.2014 | ಸಹಾಯಕ ನಿಯಂತ್ರಕರು | ಹಿರಿಯ ಬೆರಳಚ್ಚುಗಾರರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು, ಕ್ಲರ್ಕ್ ಕಂ ಟೈಪಿಸ್ಟ್, ದೈಹಿಕ ಸಹಾಯಕರು |
| 30.03.2014 ರಿಂದ 05.04.2014 | ಸಹಾಯಕ ನಿಯಂತ್ರಕರು | ವಾಹನ ಚಾಲಕರು, ಅಟೆಂಡರ್/ಜಮೇದಾರ್, ಗ್ರೂಪ್–ಡಿ, ವಾಚ್‌ಮನ್ |

| | |
|---|---|
| 06.04.2014 ರಿಂದ 13.04.2014 | ನೌಕರರುಗಳಿಂದ ಸ್ವೀಕರಿಸಿರುವ ಅಭಿಮತಗಳನ್ನು ಹಾಗೂ ತಮಗೆ ಸಂಬಂಧಿಸಿದ ಅಭಿಮತಗಳನ್ನು ಸಹಾಯಕ ನಿಯಂತ್ರಕರುಗಳು ಸಂಬಂಧಪಟ್ಟ ಉಪ ನಿಯಂತ್ರಕರುಗಳಿಗೆ ಸಲ್ಲಿಸತಕ್ಕದ್ದು. ಉಪ ನಿಯಂತ್ರಕರು ಅಭಿಮತಗಳನ್ನು ಪರಿಶೀಲಿಸಿ ದಾಖಲಾತಿಗಳೊಂದಿಗೆ ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. |
| 14.04.2014 ರಿಂದ 22.04.2014 | ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರವು ಸ್ವೀಕರಿಸಲಾದ ಅಭಿಮತಗಳನ್ನು ಪರಿಶೀಲಿಸಿ ಸ್ಥಳೀಯ ವೃಂದಕ್ಕೆ ಸೇರ್ಪಡೆ ಮಾಡುವ ಅಥವಾ ತಿರಸ್ಕರಿಸುವ ಕುರಿತಂತೆ ಆದೇಶಗಳನ್ನು ಹೊರಡಿಸತಕ್ಕದ್ದು. |

**ಈಗಾಗಲೇ ತಿಳಿಸಿದಂತೆ ಅಭಿಮತವನ್ನು ವ್ಯಕ್ತಪಡಿಸಲು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ 30 ದಿನಗಳ ಕಾಲಾವಕಾಶ ನೀಡಿರುವುದರಿಂದ, ಮೇಲೆ ತಿಳಿಸಿದ ವೇಳಾಪಟ್ಟಿಯಂತೆ ಯಾರಾದರೂ ಅಧಿಕಾರಿ/ಸಿಬ್ಬಂದಿ ಯಾವುದೇ ಕಾರಣಕ್ಕೆ ಅಭಿಮತ ವ್ಯಕ್ತಪಡಿಸಲು ಸಾಧ್ಯವಾಗದಿದ್ದಲ್ಲಿ ಹಾಗೂ ದಿನಾಂಕ: 05.04.2014 ರೊಳಗೆ ನೀಡಿದಲ್ಲಿ ಅದನ್ನು ಪರಿಗಣಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಅಧಿಕಾರಿ/ನೌಕರರು ತಮ್ಮ ಆಯ್ಕೆಯನ್ನು ಚಲಾಯಿಸದಿದ್ದಲ್ಲಿ, ಉಲ್ಲೇಖಿತ (2)ರ ನಿಯಮಗಳ ನಿಯಮ 6(1)ರ ಅನುಸಾರ, ಅವರು ಸ್ಥಳೀಯ ವೃಂದವನ್ನು ಸೇರಲು ಇಚ್ಛೆ ಹೊಂದಿಲ್ಲವೆಂದು ಪರಿಭಾವಿಸಲಾಗುವುದು.**

6. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013ರ ನಿಯಮ (2)ರ ಅನ್ವಯ ಸಂಬಂಧಪಟ್ಟ ವೃಂದ ನಿಯಂತ್ರಣ ಪ್ರಾಧಿಕಾರ (ಅಂದರೆ ನೇಮಕಾತಿ ಪ್ರಾಧಿಕಾರ) ಮೇಲೆ ತಿಳಿಸಿದಂತಹ ಅಭಿಮತಗಳನ್ನು ಪರಿಶೀಲಿಸಿ ಆಯಾ ವೃಂದಕ್ಕೆ ಅಂಗೀಕರಿಸಿ ಹಂಚಿಕೆ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ. ಅದುದರಿಂದ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರ ಈ ಬಗ್ಗೆ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಸುರೇಶ್ ಬಿ.ಕೃಷ್ಣಪ್ಪನವರ್)**
ಸರ್ಕಾರದ ಉಪ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

**ಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಒದಗಿಸುವಂತೆ ಕೋರಿದೆ.

**ಪ್ರತಿ:**

1. ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿ, ಸಿ.ಆ.ಸು.ಇ (ಆಡಳಿತ)/(ಹೈದರಾಬಾದ್-ಕರ್ನಾಟಕ ವಿಶೇಷ ಕೋಶ)/(ಸೇವಾ ನಿಯಮಗಳು-1).
4. ಎಲ್ಲಾ ಉಪ ನಿಯಂತ್ರಕರು/ಎಲ್ಲ ಸಹಾಯಕ ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ.

..4

5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–5), ವಿಧಾನ ಸೌಧ, ಬೆಂಗಳೂರು.
8. ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿಗಳು.